**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕ:</u> 25.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು:</u>** ಪ್ರತಿವಾದಿ ಪರ ವಕೀಲರು **ಶ್ರೀ. SPJ** ರವರಿಂದ.

ಖಾಲಿ ನಿವೇಶನ ಪೂರ್ತಿಯಾಗಿ ಬರದೇ ಇರುವ ಕಾರಣ ಈ ದಾವಾ ಹಾಕಿರುತ್ತೇನೆ. ನನಗೆ ಬರಬೇಕಾಗಿದ್ದ ಜಾಗದಲ್ಲಿ ¼ ರಷ್ಟು ಜಾಗ ಮಾತ್ರ ಬಂದಿರುತ್ತದೆ. ದಾವೆಯ ಬಗ್ಗೆ ನನಗೆ ಸಂಪೂರ್ಣ ತಿಳಿದಿರುತ್ತದೆ. 1981ನೇ ಇಸವಿಯಲ್ಲಿ ಕ್ರಯಕ್ಕೆ ತೆಗೆದುಕೊಂಡ ಜಾಗದ ಪೂರ್ವಕ್ಕೆ ನಮ್ಮ ಮನೆ , ಪಶ್ಚಿಮಕ್ಕೆ ಅಣ್ಣಯ್ಯ ಕರಿಯಪ್ಪ ಚಿಕ್ಕಪ್ಪ ರವರ ಸ್ವತ್ತು , ದಕ್ಷಿಣಕ್ಕೆ ರಸ್ತೆ , ಉತ್ತರಕ್ಕೆ ಓಣಿ. ಕ್ರಯಕ್ಕೆ ಪಡೆದ ಜಾಗದ ಉತ್ತರದ ಅರ್ಧ ಭಾಗದಲ್ಲಿ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ. ಮತ್ತು ದಕ್ಷಿಣ ದಿಕ್ಕಿನಲ್ಲಿ ನಾವು ಮನೆಯನ್ನು ಕಟ್ಟಿಸಿಕೊಂಡಿರುತ್ತೇವೆ. ನಾನು 2006 ನೇ ಇಸವಿಯಲ್ಲಿ ನಾವು ಮನೆ ಕಟ್ಟಿಸಿಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಮನೆ ಕಟ್ಟುವ ಮುಂಚೆಯೇ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯು 1989 ರ ಒಳಗೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಕ್ರಯಕ್ಕೆ ಪಡೆದ ನಂತರ ಅರ್ಧ ಭಾಗ ಆದ ನಂತರ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹಿಸ್ಸೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. 2006 ನೇ ಇಸವಿಯಲ್ಲಿ ನಾವು ಯನ್ನು ಕಟ್ಟಿಕೊಂಡಿರುವ ವಿಚಾರವನ್ನು ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಉತ್ತರ ದಿಕ್ಕಿನಲ್ಲಿ ಪ್ರತಿವಾದಿ ಮನೆಯನ್ನು ಕಟ್ಟಿಕೊಂಡಿರುವ ಬಗ್ಗೆ ನಾನು ವಕೀಲರಿಗೆ ಹೇಳಿರುತ್ತೇನೆ. ಆದರೆ 1990 ನೇ ಇಸವಿಯೊಳಗೆ ಕಟ್ಟಿರುವ ಬಗ್ಗೆ ಹೇಳಿರುವುದಿಲ್ಲ.

ಮನೆ ಕಟ್ಟುವ ಕಾಲಕ್ಕೆ ನಮ್ಮ ಜಾಗ ಮತ್ತು ಪ್ರತಿವಾದಿಗಳ ಜಾಗ ಎಂದು ಬರವಣಿಗೆ ಆಗಿರುತ್ತದೆಯೇ ಎಂದರೆ ಸಾಕ್ಷಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಮನೆಯನ್ನು ನಾನು ಕಟ್ಟಿರುತ್ತೇನೆ. ಸಾಮಾನ್ಯವಾಗಿ ಮನೆ ಕಟ್ಟಲು ಲೈಸೆನ್ಸ ಬೇಕೆಂದರೆ ಸರಿ. ನಾನು ಪಂಚಾಯ್ತಿಯಿಂದ ಮನೆ ಕಟ್ಟಲು ಲೈಸೆನ್ಸ ಪಡೆದಿರುತ್ತೇನೆ. ಲೈಸೆನ್ಸ ಕೋರಿ ಅರ್ಜಿಯನ್ನು ಪಂಚಾಯ್ತಿಗೆ ನೀಡಿರುತ್ತೇನೆ. ಸದರಿ ಲೈಸೆನ್ಸನ್ನು ನಾನು ನಮ್ಮ ವಕೀಲರಿಗೆ ನೀಡಿರುವುದಿಲ್ಲ. ಪ್ರತಿವಾದಿಯು ಸಹಾ ಮನೆ ಕಟ್ಟುವ ಕಾಲಕ್ಕೆ ಲೈಸೆನ್ಸ

ಪಡೆದು ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಮನೆಗಳನ್ನು ಕಟ್ಟುವ ಕಾಲಕ್ಕೆ ನನ್ನ ಮತ್ತು ಪ್ರತಿವಾದಿ ನಡುವೆ ಹಿಸ್ಸೆ ಬಗ್ಗೆ ತಕರಾರು ಇರಲಿಲ್ಲ. ಕಾನೂನುಬದ್ದವಾಗಿ ಹಿಸ್ಸೆ ಆಗಿದ್ದು ಖಾತೆ ಆಗಿರುವುದಿಲ್ಲ ಎಂದು ನೀವು ಈ ದಾವೆ ಹಾಕಿರುತ್ತೀರಿ ಎಂದರೆ ಸಾಕ್ಷಿಯು ಸಮವಾಗಿ ಹಿಸ್ಸೆ ಆಗಿರುವುದಿಲ್ಲ ಎಂದು ದಾವಾ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಮನೆ ಕಟ್ಟುವ ಕಾಲಕ್ಕೆ ನಿಮ್ಮ ತಂದೆ ತಕರಾರು ಮಾಡಿರುತ್ತಾರಾ ಎಂದರೆ ಸಾಕ್ಷಿಯು ಆ ಕಾಲಕ್ಕೆ ನಾನು ಚಿಕ್ಕವನಾಗಿದ್ದು ನನ್ನ ತಂದೆ ತಕರಾರು ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಮನೆ ಕಟ್ಟುವ ಕಾಲಕ್ಕೆ ಪ್ರತಿವಾದಿಗಳು ನಮಗೆ ತಕರಾರು ಮಾಡಿರುತ್ತಾರೆ. ಹಾಗಾಗಿ ನಾನು ಈಗ ದಾವಾ ತಂದಿರುತ್ತೇನೆ. 2006ನೇ ಇಸವಿಯಲ್ಲಿ ನಾನು ಒಂದು ದಾವೆ ಹಾಕಿದ್ದು ಅದು ನಮ್ಮ ಪರ ಆಗಿರುತ್ತದೆ. 2006ನೇ ಇಸವಿಯಲ್ಲಿ ಸಹಾ ನಾನು ಈ ದಾವೆ ಹಾಕಿರುವ ಕಾರಣ ಪ್ರಾರ್ಥನೆ ಕೋರಿಯೇ ಆ ದಾವಾ ಸಹಾ ಹಾಕಿದ್ದೆ. ನನ್ನ ಮತ್ತು ಪ್ರತಿವಾದಿಗಳ ಮನೆಯ ಮಧ್ಯ ಯಾವುದೇ ಜಾಗ ಇರುವುದಿಲ್ಲ ಮನೆಗಳು ಅಂಟಿಕೊಂಡಿರುತ್ತವೆ. ನಮ್ಮ ಮನೆಯ ದಕ್ಷಿಣ ಕಡೆ ರಸ್ತೆಗೆ 04 ಅಡಿ ಜಾಗ ಇರುತ್ತದೆ. ನಮ್ಮ ಮನೆ ಪೂರ್ವಕ್ಕೆ 13 ಅಡಿ ಜಾಗ ಇದ್ದು ಅದು ನಮ್ಮ ಸ್ವಾದೀನದಲ್ಲಿರುತ್ತದೆ ಮತ್ತು ಪಶ್ಚಿಮಕ್ಕೆ 02ವರೆ ಅಡಿ ಜಾಗ ಇರುತ್ತದೆ. ಸದರಿ ನಮ್ಮ ಮನೆಯಿಂದ 02ವರೆ ಅಡಿ ಆದ ನಂತರ ನಮಗೆ ಸೇರಿದ ಮನೆ ಇರುತ್ತದೆ.

ಸದರಿ ಹಳೇ ಮನೆಯು ನಮಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತು. ಪ್ರತಿವಾದಿಯ ಮನೆಯ ಉತ್ತರಕ್ಕೆ 02ವರೆ ಅಡಿ ಜಾಗ ಇರುತ್ತದೆ ಮತ್ತು ಆ ಜಾಗದ ನಂತರ ಓಣಿ ಇರುತ್ತದೆ. ಆ ಜಾಗದ ಪೂರ್ವಕ್ಕೆ ಪ್ರತಿವಾದಿಯು ಪಡೆದಿರುವ ಪ್ರತ್ಯೇಕ ಆಸ್ತಿ ಇರುತ್ತದೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಕಟ್ಟಿರುವ ಮನೆಗು ಮತ್ತು ಪ್ರತಿವಾದಿಯ ಪ್ರತ್ಯೇಕ ಆಸ್ತಿಯ ನಡುವೆ ಎಷ್ಟು ಜಾಗ ಇರುತ್ತದೆ ಎಂದು ನನಗೆ ತಿಳಿದಿಲ್ಲ. ಸದರಿ ಪ್ರತ್ಯೇಕ ಆಸ್ತಿಯನ್ನು ಪ್ರತಿವಾದಿ 1(ಡಿ) ರವರ ಪತ್ನಿ ಹೆಸರಿನಲ್ಲಿ ತೆಗೆದುಕೊಂಡ ಜಾಗ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲಾ. ಪ್ರತಿವಾದಿಯ ಮನೆಯ ಪಶ್ಚಿಮಕ್ಕೆ 13 ಅಡಿ ಜಾಗ ಇರುತ್ತದೆ ಸಾಕ್ಷಿ ಮುಂದುವರೆದು ಆ ಜಾಗ ನಮ್ಮದೇ ಎಂದು ನುಡಿಯುತ್ತಾರೆ. ಸದರಿ 13 ಅಡಿ ಜಾಗಕ್ಕೆ ನಾವು ಯಾವುದೇ ಬೇಲಿ ಹಾಕಿರುವುದಿಲ್ಲ. ನಮ್ಮ ಸ್ವಾದೀನದಲ್ಲಿ ರುವ ಮನೆಯು ಪೂರ್ವ ಪಶ್ಚಿಮ 14 ಅಡಿ ಉತ್ತರ ದಕ್ಷಿಣ 28 ಅಡಿಗಳು. ನಮ್ಮ ಸ್ವಾದೀನದಲ್ಲಿ ಪೂರ್ವ ಪಶ್ಚಿಮ 14 ಅಡಿ ಉತ್ತರ ದಕ್ಷಿಣ 28

ಅಡಿಗಳು ಇರುತ್ತದೆ. ಪ್ರತಿವಾದಿಗಳ ಸ್ವಾದೀನದಲ್ಲಿ ಪೂರ್ವ ಪಶ್ಚಿಮ 27 ಅಡಿ , ದಕ್ಷಿಣೋತ್ತರ 40 ಅಡಿಗಳಿರುತ್ತದೆ. ಈ ವಿಚಾರವನ್ನು ನಾನು ವಕೀಲರಿಗೆ ಹೇಳಿರುವುದಿಲ್ಲ. ಹೇಳಲು ತೊಂದರೆ ಇರಲಿಲ್ಲ.

ನಾವು 2006ನೇ ಇಸವಿಯಲ್ಲಿ ಮನೆ ಕಟ್ಟುವ ಕಾಲಕ್ಕೆ ನಮಗೆ ಸರಿಯಾಗಿ ಹಿಸ್ಸೆ ಆಗಿರುವುದಿಲ್ಲ ಎಂದು ವಕೀಲರ ಮೂಲಕ ನೋಟೀಸ್ ನೀಡಿ ಕೇಳಿರುತ್ತೇನೆ. ಸದರಿ ನೋಟೀಸ್ ನಲ್ಲಿ ನಾನು ಮನೆ ಕಟ್ಟಿರುವ ಬಗ್ಗೆ ಮತ್ತು ಉಳಿಕೆ ಜಾಗ ಬರಬೇಕಾಗಿರುವ ಬಗ್ಗೆ ಹೇಳಿರುತ್ತೇನೆ. ಸದರಿ ನೋಟೀಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪ್ರತಿವಾದಿಗೆ ನೋಟೀಸ್ ನೀಡಿರುವುದಿಲ್ಲ ಮತ್ತು 2006 ನೇ ಇಸವಿಗೆ ಮುಂಚಿತವಾಗಿ ನಾನು ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ನ್ನು ಈಗ ಸಾಕ್ಷಿಗೆ ತೋರಿಸಿದ್ದು ಸದರಿ ನೋಟೀಸ್ ನ್ನು ನೀವು 2006 ರಲ್ಲಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ನೋಟೀಸ್ ನೋಡಿ ನಾನು ವಕೀಲರನ್ನು ಕೇಳಬೇಕು ಎಂದು ನುಡಿಯುತ್ತಾರೆ. 2006ನೇ ಇಸವಿಯಲ್ಲಿ ನಾನು ಪ್ರತಿವಾದಿಗೆ ನೀಡಿರುತ್ತೇನೆಂದು ಹೇಳುತ್ತಿರುವ ನೋಟೀಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಹಿಸ್ಸೆಗೆ ಬಂದು ಕಟ್ಟಿ ಕೊಂಡಿರುವ ಮನೆಯ ಸ್ವತ್ತು ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿಗೆ ಸಂಬಂದಪಟ್ಟ ಖಾತೆ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ತಿಳಿದಿಲ್ಲ. ವಾದಿ ದಾವಾ ಸ್ವತ್ತಿಗೆ ಸಂಬಂದಪಟ್ಟ ಖಾತೆ ಯಾರ ಹೆಸರಿನಲ್ಲಿರುತ್ತದೆ ಎಂಬುದನ್ನು ತಿಳಿದುಕೊಂಡು ಈ ದಾವಾ ಹಾಕಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ 1ನೇ ವಾದಿ ಮತ್ತು 1ನೇ ಪ್ರತಿವಾದಿ ಬಾಯಿ ಮಾತಿನ ಮೂಲಕ ಹಿಸ್ಸೆ ಮಾಡಿಕೊಂಡು ಅದರ ಪ್ರಕಾರ ಸ್ವಾದೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಬಾಯಿ ಮಾತಿನಲ್ಲಿ ಮತ್ತು ಕಣ್ಣು ಗುರುತಿನ ಪ್ರಕಾರ ಮಾತ್ರ ಇರುತ್ತಾರೆ ಎಂದು ನುಡಿಯುತ್ತಾರೆ. ಮತ್ತು ಸಮವಾಗಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಬಾಯಿ ಮಾತಿನ ಹಿಸ್ಸೆ ಮೂಲಕ ಮನೆ ಕಟ್ಟಿ ಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ತಂದೆ ದಾವೆ ಹಾಕುವ ಕಾಲಕ್ಕೆ ಬಾಯಿ ಮಾತಿನಲ್ಲಿ ಹಿಸ್ಸೆ ಆಗಿರುತ್ತದೆ ಆದರೆ ಸಮವಾಗಿ ಹಿಸ್ಸೆ ಆಗಿಲ್ಲ ಎಂದೂ ಸಹಾ ಹೇಳಿ ಬರೆಸಿರುತ್ತಾರೆ. ಬಾಯಿ ಮಾತಿನ ಮೂಲಕ ಹಿಸ್ಸೆ ಆಗಿದ್ದ ಪ್ರಕಾರ ಖಾತೆ ಆಗಿಲ್ಲ ಎಂದು ಈ ದಾವಾ ಹಾಕಿರುತ್ತೇನೆ ಎಂದರೆ ಸರಿ. ನಾವು ಮತ್ತು ಪ್ರತಿವಾದಿ ಮನೆ ಕಟ್ಟುವವರೆಗೂ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು

ಅವರ ಸ್ವಾದೀನದಲ್ಲಿರುವ ಹಿಸ್ಸೆ ಪಡೆಯಬೇಕೆಂಬ ದುರುದ್ದೇಶದಿಂದ ನಾನು ಈ ದಾವಾ ಹಾಕಿರುತ್ತೇನೆ ಎಂದರೆ ಸುಳ್ಳು. ಬಾಯಿ ಮಾತಿನ ಮೂಲಕ ಇರುವ ಸ್ವಾದೀನದ ಆಸ್ತಿಗೆ ಖಾತೆ ಮಾಡಿಸಿಕೊಳ್ಳಲು ಯಾವುದೇ ತಕರಾರು ಇರುವುದಿಲ್ಲವೆಂದು ಪ್ರತಿವಾದಿಗಳು ಹೇಳಿದ್ದರು ಎಂದರೆ ಸರಿ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**